ಸರಿಯಿದ್ದಿಲ್ಲ. ಅದಕ್ಕೆ ಇಲ್ಲದ ಕಾರಣ ಹುಡುಕಿ ಕಿತ್ತಾಡುತ್ತಿದ್ದ. ಕೆಟ್ಟ ಕೆಟ್ಟ ಬೈಗಳಿಂದ ತೃಪ್ತಿಯಾಗುವವರೆಗೂ ಬೈಯುತ್ತಿದ್ದ. ತನ್ನ ವಾದಕ್ಕೆ ಪ್ರತಿವಾದಿಸುತ್ತಿದ್ದ ಸೀತೆಯನ್ನು ಯಾರೋ ಮರುಳುಮಾಡಿದ್ದಾರೆಂದು ಕಂಡ ಕಂಡ ಮಾಂತ್ರಿಕರು ತಾಂತ್ರಿಕರು ಎಂದು ಅಲೆದಾಡತೊಡಗಿದ್ದ. ಅವಳ ಮೈಯಲ್ಲಿ ದೆವ್ವ ವಾಸಿಸುತ್ತಿದೆಯೆಂದು ಭ್ರಮಿಸಿ ಹಿಂಸಿಸಿದ. ಅದೆಲ್ಲ ಸೀತೆಗೆ ಮಾತ್ರ ಗೊತ್ತು. ಯಾರಲ್ಲಾದರೂ ಹೇಳಿಕೊಳ್ಳಬೇಕೆಂದರೆ ತಾನು ಪಟ್ಟ ನೋವು, ಸಹಿಸಿದ ಅವಮಾನವನ್ನೆಲ್ಲ ಹರಾಜು ಹಾಕಿದಂತಾಗುತ್ತದೆ. ತನ್ನ ಮಾನವೇ ಹೋಗುವುದು. ತನ್ನ ಖಾಸಗೀ ಬದುಕನ್ನು ಹರಿದು ಚಿಂದಿಯಾಗಿಸುವ ಮನಸ್ಸಿಲ್ಲದೇ ತುಟಿಬಿಗಿ ಹಿಡಿದು ಚಿಕ್ಕಮಕ್ಕಳನ್ನು ಕಟ್ಟಿಕೊಂಡು ಸೀತೆ ಜೀವನವನ್ನು ಸವೆಸತೊಡಗಿದ್ದಳು. ಮಕ್ಕಳು ಚಿಕ್ಕವರಿದ್ದರಿಂದ ಬಹುಬೇಗ ಪರಿಸ್ಥಿಗೆ ಹೊಂದಿಕೊಂಡರು.

ಸೀತೆಗೆ ಒಳ್ಳೆ ಕಂಪೆನಿಯಲ್ಲಿ ಉದ್ಯೋಗ. ಆಫೀಸು, ಮನೆಗೆಲಸ, ಮಕ್ಕಳ ಓದು, ಪರೀಕ್ಷೆ ಇತ್ಯಾದಿಗಳಲ್ಲಿ ಅವಳು ರಾಮಪ್ಪನನ್ನು ಮರೆತರೂ ಆಗಾಗ ಒಬ್ಬಳೇ ಕೂತಾಗ ಯೋಚಿಸುತ್ತಿದ್ದಳು. ಯಾವಾಗಲೂ ಜಮದಗ್ನಿಯಂತೆ ಉರಿ ಉರಿ ಸಿಟ್ಟಿನಲ್ಲೇ ಇರುತ್ತಿದ್ದ ರಾಮನೊಂದಿಗೆ ಸೀತೆಗೆ ಪ್ರೇಮ ಸೌಹಾರ್ದತೆಯುಳ್ಳ ಬದುಕು ಸಿಗಲೇ ಇಲ್ಲ. ಅವಳೊಂದು ಮಾತಾಡಿದರೆ ಅವನೊಂದು ತಿಳಿಯುತ್ತಿದ್ದ. ಅವನ ರಾತ್ರಿಯ ನಿತ್ಯದ ಬೇಡಿಕೆಯನ್ನು 'ಇವತ್ತು ಬೇಡ' ಎಂದರೂ ಸಾಕು ಭುಸುಗುಡುತ್ತಿದ್ದ. ಅದನ್ನೊಂದು ಅಪಮಾನವೆಂದೆ ಗ್ರಹಿಸಿ ಸೀತೆಯನ್ನು ಹಿಂಸಿಸುತ್ತಿದ್ದ. ಅವನು ಬಯಸಿದ್ದೆಲ್ಲ ಅವತ್ತೇ ಬೇಕು. ಏನಾದರೂ ವಿವರಿಸ ಹೋದರೆ 'ನಿನ್ನ ಶಾಣ್ಯಾತನವನ್ನೆಲ್ಲ ನೀನೆ ಇಟ್ಟುಕೋ! ನನ್ನೆದುರು ತೋರಿಸಬೇಡ' ಎನ್ನುತ್ತಿದ್ದ. ದಾಂಪತ್ಯವೆಂದರೆ ಮಧುಮಾಸ ಅದೂ ಇದು ಎಂದೆಲ್ಲ ಮಿಲ್ಸ್ ಆಂಡ್ ಬೂನ್ಸ್ ಓದಿಕೊಂಡು ರೊಮ್ಯಾಂಟಿಕ್ ಬದುಕನ್ನು ಕಲ್ಪಿಸಿಕೊಂಡಿದ್ದ ಸೀತೆಯ ಪಾಲಿಗೆ ಬಂದದ್ದು ಪ್ರೀತಿಯಿಲ್ಲದ ತೀರಾ ವ್ಯಾವಹಾರಿಕವಾದ ನೀರಸ ಬದುಕು. ತನ್ನನ್ನೆ ತಾನು ಅವನ ತೃಷೆಗೆ, ಕಾಮನೆಗಳಿಗೆ ಒಪ್ಪಿಸಿಕೊಳ್ಳುತ್ತ ಬಿದ್ದಿರುವ ಬಾಳು.

ಆಗ ರಾಮಪ್ಪನೂ ಒಳ್ಳೇ ಸರಕಾರಿ ಹುದ್ದೆಯಲ್ಲಿದ್ದ. ಅವಳು ಉದ್ಯೋಗಸ್ಥೆ ಎಂಬ ಒಂದೇ ಕಾರಣಕ್ಕೆ ರಾಮಪ್ಪ ಒಂದು ಪೈಸೆಯನ್ನೂ ಕೈಗೆ ಕೊಟ್ಟದ್ದಿಲ್ಲ. ತಾನಾಗಿ ಒಮ್ಮೆಯೂ ಅವಳನ್ನು 'ನಿಂಗೇನಾದರೂ ಅಗತ್ಯವಿದೆಯಾ?' ಎಂದು ಕೇಳಿದವನೂ ಅಲ್ಲ. ಪುಟ್ಟ ಕಾಣಿಕೆಯನ್ನೂ ನೀಡಿದವನಲ್ಲ. ಗಂಡನಾಗಿ ಅವ ಕೊಟ್ಟಿದ್ದು ಎರಡು ಮಕ್ಕಳನ್ನು ಮತ್ತು ಹೊತ್ತು ಹೊತ್ತಿನ ಊಟವನ್ನು ಮಾತ್ರ. ಹೃದಯ ಬಯಸುವ ಮತ್ತೇನೂ ಇಲ್ಲ. ಬಿಟ್ಟಿಯಾಗಿ ಏನನ್ನೂ ಕೊಟ್ಟದ್ದಿಲ್ಲ. ಅವನೊಂದಿಗೆ ಇಷ್ಟೆಲ್ಲಾ ಜೀವನದಲ್ಲಿ ನವೆದರೂ, ಅವನಿಲ್ಲದ ಬದುಕನ್ನು ಪಾಷಾಣದಂತೆ ಸವೆಸಿದರೂ ಇಂದು ತಾನು ಒಂದು ನೂರು ರೂಪಾಯಿ ಕೇಳಿದಾಗಲೂ ದೊಡ್ಡಗುಣ ತೋರದೆ ಯಾಕೆ ಕೊಡಲಿ? ಎನ್ನುವ ಭಾವದಿಂದ ಜಗಳಕ್ಕೆ ನಿಲ್ಲುವ ರಾಮಪ್ಪನ ಕೆಟ್ಟಚಾಳಿಗೆ ಬೇಸತ್ತು, ಜುಗುಪ್ಸೆಪಟ್ಟುಕೊಂಡು ಸೀತೆ ತಾನೂ ಏನೆಲ್ಲ ಒದರಬೇಕು ಎಂದುಕೊಂಡವಳು, ಹಾಳಾಗಿ ಹೋಗಲಿ ಎಂದು ಕೈಚೀಲ ಎತ್ತಿಕೊಂಡು ತನ್ನ ಪರ್ಸಿನಿಂದ ನೂರರ ಎರಡು ನೋಟನ್ನು ಕೈಯಲ್ಲಿ ಮಡಿಚಿಕೊಂಡು ಚಪ್ಪಲಿಹಾಕಿ ಹೊರಬಿದ್ದಳು.

ಹಿಂದಿನಿಂದ ರಾಮಪ್ಪ ಕಿರುಚಾಡುತ್ತಲೆ ಇದ್ದ. 'ಅಷ್ಟು ದುಡ್ಡಿಲ್ಲದೇ ಇರ್ತಾಳಾ ಭೋಸಡಿ? ನನ್ನನ್ನೇ ಕೆತ್ತಬೇಕು.' ಮುಂದೆ ಕೇಳಿಸಿಕೊಳ್ಳಲಿಚ್ಚಿಸದೇ ಸೀತೆ ಮೇಲೆ ಬಂದ ಲಿಫ್ಟ್ ಬಾಗಿಲು ತೆಗೆದು ಗಂಟಲು ಸೆರೆ ಕಟ್ಟಿಕೊಂಡು ತಡೆಯಾಲಾರದೇ ಉಕ್ಕುತ್ತಿದ್ದ ಕಣ್ಣೀರನ್ನು ಕಷ್ಟಪಟ್ಟು